**ಅಸಲು ದಾವಾ ಸಂಖ್ಯೆಃ 980/2018**
**ಪಿ.ಡಬ್ಲೂ -1**

**ದಿನಾಂಕ:13-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ ಎ.ಎ.ಪಿ. ರವರಿಂದಃ-**

**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಇಂಗ್ಲೀಷ್ ಭಾಷೆ ಬರುತ್ತಿದ್ದು, ಇಂಗ್ಲೀಷ್ ಭಾಷೆಯಲ್ಲಿ ನುಡಿದ ಸಾಕ್ಷ್ಯವನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು.)**

ನಾನು ಹಾಜರುಪಡಿಸಿದ ನಿಪಿ-10 ರಿಂದ 14 ರವರೆಗಿನ ದಾಖಲೆಗಳನ್ನು ದಾವೆಯನ್ನು ಹೂಡುವ ಸಮಯದಲ್ಲಿ ಹಾಜರುಪಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾನು ಸದರಿ ದಾಖಲೆಗಳನ್ನು ಕೇಳಿದಾಗ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ನಿಪಿ-13ರ ಪ್ರಕಾರ ದಿನಾಂಕ 30.04.2019 ರಂದು ಪ್ರತಿವಾದಿ ನನ್ನ ಅಕೌಂಟ್ ಗೆ 5,000/- ರೂಗಳನ್ನು ಹಾಕಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಹೂಡುವ ಸಮಯದಲ್ಲಿ ದಿನಾಂಕ 30.04.2019 ರಂದು 5,000/- ರೂಗಳನ್ನು ಪಡೆದ ಬಗ್ಗೆ ಮಾಹಿತಿ ಇತ್ತೇ ಎಂದರೆ ಸಾಕ್ಷಿ ಇರಲಿಲ್ಲ ಎನ್ನುತ್ತಾರೆ. ಈ ದಾವೆಯನ್ನು ಹೂಡಿದ ನಂತರ ಆ ಹಣವನ್ನು ನೀವು ಪಡೆದಿದ್ದೀರಿ ಎಂದರೆ ಸಾಕ್ಷಿ ನಾವು ಹಾಜರುಪಡಿಸಿದ Account Statement ಪ್ರಕಾರ ಜನವರಿ 2018 ರಲ್ಲಿ ಕೊನೆಯದಾಗಿ ಹಣ ಕಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿಗೆ ಕಾನೂನುಬದ್ಧ ನೋಟಿಸ್ ನೀಡುವ ಮೊದಲು ನೀವು ಪ್ರತಿವಾದಿಗೆ ಹಣ ಕಟ್ಟುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ನಾವು ಹಲವಾರು ಬಾರಿ ಹಣ ಕಟ್ಟುವಂತೆ ಕೇಳಿದ್ದೇನೆ, ಪ್ರತಿವಾದಿ ಹಣ ಕಟ್ಟದಿದ್ದಾಗ ಈ ದಾವೆಯನ್ನು ಹೂಡಿದ್ದೇನೆ ಎನ್ನುತ್ತಾರೆ. ನೋಟಿಸ್ ಕಳುಹಿಸುವ ಮೊದಲು ಪ್ರತಿವಾದಿಗೆ ಹಣ ಕಟ್ಟುವಂತೆ ಕೇಳಿದ್ದೇನೆ ಎಂದು ತೋರಿಸಲು ನಿಮ್ಮ ಬಳಿ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ನಮ್ಮ ಬಳಿ ಯಾವುದೇ ದಾಖಲೆಗಳು ಇಲ್ಲ, ನಾವು ಮೌಖಿಕವಾಗಿ ಕೇಳಿದ್ದೆವು ಎನ್ನುತ್ತಾರೆ. ನಾವು ಪ್ರತಿವಾದಿಗೆ ಹಿಂದಿನ ಬಾಡಿಗೆ ಕರಾರಿನಂತೆ ಸ್ವತ್ತಿನ ಕಬ್ಜೆಯಲ್ಲಿ ಮುಂದುವರೆಯುವಂತೆ ಮತ್ತು 5,000/- ರೂಗಳು

ಬಾಡಿಗೆ ಹಣ ನೀಡುವಂತೆ ತಿಳಿಸಿದ್ದೆವು, ನಾವು ಹೆಚ್ಚಿಗೆ ಬಾಡಿಗೆ ಹಣವನ್ನು ಪ್ರತಿವಾದಿಯಿಂದ ಕೇಳಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ನಾವು ಹೆಚ್ಚಿಗೆ ಬಾಡಿಗೆ ಹಣವನ್ನು ನೀಡುವಂತೆ ಕೇಳಿದ್ದೆವು, ಆದರೂ ಸಹ ಪ್ರತಿವಾದಿ ಬಾಡಿಗೆ ಹಣ ನೀಡಿಲ್ಲ ಎನ್ನುತ್ತಾರೆ. ನಾವು ಪ್ರತಿವಾದಿಯನ್ನು 5,000/- ರೂಗಳನ್ನು ಪಡೆದಿದ್ದೇವೆ ಮತ್ತು ಹೆಚ್ಚಿಗೆ ಬಾಡಿಗೆ ಹಣವನ್ನು ಕೊಡುವಂತೆ ಮತ್ತು ಬಾಕಿ ಹಣವನ್ನು ಕೊಡುವಂತೆ ಕೇಳಿದ್ದೇವೆ ಎಂದರೆ ಸರಿಯಲ್ಲ , ಸಾಕ್ಷಿ ನಾವು ಕೇಳಿದ್ದೇವೆ ಎನ್ನುತ್ತಾರೆ. ವಾದ ಪತ್ರದಲ್ಲಿ ಕೇಳಿರುವಂತೆ ಪ್ರತಿವಾದಿ ಹೆಚ್ಚಿನ ಬಾಡಿಗೆ ಹಣವನ್ನು ಕೊಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**2.** ದಾವಾ ಸ್ವತ್ತನ್ನು ಬಾಡಿಗೆ ಕೊಡುವ ಸಮಯದಲ್ಲಿ ರಸ್ತೆ ಅಗಲೀಕರವಾಗಿರಲಿಲ್ಲ ಮತ್ತು ಬ್ರಿಡ್ಜ್ ಇರಲಿಲ್ಲ ಎಂದರೆ ಸರಿ . ಈಗ ಅಲ್ಲಿ ಬ್ರಿಡ್ಜ್ ಇದೆ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಬ್ರಿಡ್ಜ್ ಮತ್ತು ಸೂಕ್ತ ರಸ್ತೆ ಇದೆ ಎನ್ನುತ್ತಾರೆ. ಬ್ರಿಡ್ಜ್ ಇರುವುದರಿಂದ ರಸ್ತೆಯ ಎರಡೂ ಕಡೆ ಜಾಗವಿಲ್ಲದ ಕಾರಣ ಯಾವುದೇ ವ್ಯವಹಾರ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಬ್ರಿಡ್ಜ್ ಕಟ್ಟುವ ಸಮಯದಲ್ಲಿ ಸೂಕ್ತ ಜಾಗ ಬಿಡಲಾಗಿದೆ , ಅಲ್ಲಿ ವ್ಯವಹಾರ ಮಾಡಬಹುದು ಎನ್ನುತ್ತಾರೆ. ಬ್ರಿಡ್ಜ್ ನ್ನು ಯಾವಾಗ ಕಟ್ಟಲಾಯಿತು ಎಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ. ಬ್ರಿಡ್ಜ್ ಇರುವುದರಿಂದ ವ್ಯವಹಾರ ಮಾಡಲಾಗುವುದಿಲ್ಲ, ವ್ಯವಹಾರಕ್ಕೆ ತೊಂದರೆ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅಲ್ಲಿ ಸೂಕ್ತ ಜಾಗ ಬಿಟ್ಟಿರುವುದರಿಂದ ವ್ಯವಹಾರಕ್ಕೆ ಯಾವುದೇ ತೊಂದರೆ ಆಗುವುದಿಲ್ಲ ಎನ್ನುತ್ತಾರೆ. ವ್ಯವಹಾರಕ್ಕೆ ತೊಂದರೆ ಆಗಿರುವುದರಿಂದ ನಾನು ಪ್ರತಿವಾದಿಗೆ ಮೊದಲೇ ನಿಗದಿಯಾದ ಬಾಡಿಗೆ ಹಣ ನೀಡುವಂತೆ ಹೇಳಿದ್ದೆ ಎಂದರೆ ಸರಿಯಲ್ಲ.

**3.** ಗೋಡಾನ್ ನ ಕ್ಷೇತ್ರ ಎಷ್ಟು ಇದೆ ಎಂದರೆ ಸಾಕ್ಷಿ ನನಗೆ ಹೇಳಲಾಗುವುದಿಲ್ಲ ಎನ್ನುತ್ತಾರೆ. ಗೋಡಾನ್ ಗೆ 5,000/- ರೂಗಳನ್ನು ಬಾಡಿಗೆಯಾಗಿ ನಿಗದಿ ಮಾಡಲಾಗಿತ್ತು . ಗೋಡಾನ್ ನ್ನು ಯಾವಾಗ ಪ್ರತಿವಾದಿಗೆ ಬಾಡಿಗೆಯಾಗಿ ನೀಡಲಾಗಿತ್ತು ಎಂದರೆ ಸಾಕ್ಷಿ ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ ಎನ್ನುತ್ತಾರೆ. ಗೋಡಾನ್ ಬಾಡಿಗೆಗೆ ನೀಡಲು ಯಾವುದೇ ಬರವಣಿಗೆಯ ಕರಾರು ಪತ್ರ ಆಗಿಲ್ಲ ಎಂದರೆ ಸರಿ, ಸಾಕ್ಷಿ ಬಾಯಿ ಮಾತಿನ ಮೂಲಕ ಬಾಡಿಗೆ ಕೊಡಲಾಗಿತ್ತು ಎನ್ನುತ್ತಾರೆ. ಗೋಡಾನ್ ಗೆ 5,000/- ರೂಗಳನ್ನು ಬಾಡಿಗೆಯಾಗಿ ನೀಡಬೇಕೆಂದು ಯಾವುದೇ ಬರವಣಿಗೆ ಕರಾರು ಆಗಿಲ್ಲ ಎಂದರೆ ಸರಿ. ಪ್ರತಿವಾದಿ ಗೋಡಾನ್ ಗೆ 5,000/- ರೂಗಳನ್ನು ಬಾಡಿಗೆ ಕೊಟ್ಟ ಬಗ್ಗೆ ಯಾವುದೇ ರಶೀದಿ ಇಲ್ಲ ಎಂದರೆ ಸಾಕ್ಷಿ ಅವರು ಬಾಡಿಗೆ ನೀಡದ ಕಾರಣ ನಾವು ದಾವೆ ಹೂಡಿದ್ದೇವೆ ಎನ್ನುತ್ತಾರೆ. ನೀವು ಏಕೆ ಪ್ರತಿವಾದಿಯಿಂದ ಯಾವುದೇ ದಾಖಲೆಯನ್ನು ಬರೆಸಿಕೊಳ್ಳಲಿಲ್ಲ ಎಂದರೆ ಸಾಕ್ಷಿ ನಾವು ಬರೆದುಕೊಡುವಂತೆ ಕೇಳಿದ್ದೆವು, ಪ್ರತಿವಾ ಬರೆದುಕೊಟ್ಟಿಲ್ಲ ಎನ್ನುತ್ತಾರೆ. ಪ್ರತಿವಾದಿ ಬಾಡಿಗೆದಾರನಲ್ಲ, ಆದ್ದರಿಂದ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಪ್ರತಿವಾದಿ ಗೋಡಾನ್ ನ ಕಬ್ಜೆಯಲ್ಲಿದ್ದು ಎಲ್ಲಾ ಮಷಿನ್ ಗಳನ್ನು ಇಟ್ಟಿದ್ದಾರೆ ಎನ್ನುತ್ತಾರೆ.

**4.** ಯಾರ ಹೆಸರಿನಲ್ಲಿ ಗೋಡಾನ್ ನ್ನು ಬಾಡಿಗೆಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ನಮ್ಮ ಪಾಲುದಾರಿಕೆವತಿಯಿಂದ ಕೊಟ್ಟಿದ್ದೆವು ಎನ್ನುತ್ತಾರೆ. ಪಾಲುದಾರಿಕೆಯ ಹೆಸರು Sri Ram Construction. ಗೋಡಾನ್ ನನ್ನು ಯಾವ ಷರತ್ತಿನ ಮೇಲೆ ಬಾಡಿಗೆಗೆ ಕೊಡಲು ಒಪ್ಪಿಕೊಳ್ಳಲಾಗಿತ್ತು ಎಂದರೆ ಸಾಕ್ಷಿ ಡೆಪಾಸಿಟ್ ಮತ್ತು ಬಾಡಿಗೆ ಹಣ ಕೊಡಲು ಮಾತುಕತೆ ಆಗಿತ್ತು, ಆದರೆ ಪ್ರತಿವಾದಿ ಡೆಪಾಸಿಟ್ ಹಣವನ್ನು ಕೊಡಲಿಲ್ಲ , ಬಾಡಿಗೆ ಹಣವನ್ನು ಚೆಕ್

ಮುಖಾಂತರ ಅಕೌಂಟ್ ಗೆ ಜಮಾ ಮಾಡುತ್ತಿದ್ದರು ಎನ್ನುತ್ತಾರೆ. ನೀವು ಹಾಜರುಪಡಿಸಿದ Account Statement ನಲ್ಲಿ ಪ್ರತಿವಾದಿ ಗೋಡಾನ್ ನ ಬಾಡಿಗೆಯಾಗಿ 5,000/- ರೂಗಳನ್ನು ಕಟ್ಟುತ್ತಿದ್ದರು ಎಂದು ಬರೆಯಲಾಗಿದೆಯೇ ಎಂದರೆ ಸಾಕ್ಷಿ 5,000/- ರೂಗಳು ಕಟ್ಟಿದ್ದು ಗೊತ್ತಾಗುತ್ತದೆ, ಆದರೆ ಅದು ಗೋಡಾನ್ ಬಾಡಿಗೆ ಎಂದು ಅದರಲ್ಲಿ ನಮೂದಾಗಿಲ್ಲ ಎನ್ನುತ್ತಾರೆ. ನಾವು ಮೊದಲು ಅಂಗಡಿ ಮಳಿಗೆಯನ್ನು ಪ್ರತಿವಾದಿಗೆ ಬಾಡಿಗೆಯಾಗಿ ಕೊಟ್ಟಿದ್ದೆವು, ನಂತರ ಪ್ರತಿವಾದಿಯ ಕೋರಿಕೆಯ ಮೇರೆಗೆ ಗೋಡಾನ್ ನ್ನು ಬಾಡಿಗೆಗೆ ಕೊಟ್ಟಿದ್ದೇವೆ, ಯಾವ ದಿನಾಂಕದಿಂದ ಗೋಡಾನ್ ನ್ನು ಬಾಡಿಗೆಗೆ ಕೊಟ್ಟಿದ್ದೇವೆ ಎಂದು ನೆನಪಿಲ್ಲ ಎನ್ನುತ್ತಾರೆ. ಅಂಗಡಿ ಮಳಿಗೆಯ ಕರಾರು ಪತ್ರವಾದ ನಂತರ ಎಷ್ಟು ತಿಂಗಳ ನಂತರ ಗೋಡಾನ್ ನ್ನು ಬಾಡಿಗೆಗೆ ಕೊಡಲಾಗಿದೆ ಎಂದರೆ ಸಾಕ್ಷಿ ನನಗೆ ನಿಖರವಾದ ದಿನಾಂಕ ಹೇಳಲಾಗುವುದಿಲ್ಲ ಎನ್ನುತ್ತಾರೆ. ವಾದ ಪತ್ರದಲ್ಲಿ ಮತ್ತು ನೋಟಿಸಿನಲ್ಲಿ ಯಾವ ದಿನಾಂಕದಂದು ಗೋಡಾನ್ ನ್ನು ಪ್ರತಿವಾದಿಗೆ ಬಾಡಿಗೆಗೆ ಕೊಡಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ಮತ್ತು ನೋಟಿಸಿನಲ್ಲಿ ಯಾವ ದಿನಾಂಕದಿಂದ ಹಣವನ್ನು ಡೆಪಾಸಿಟ್ ಮಾಡಬೇಕು ಮತ್ತು ಎಷ್ಟು ದಿನ ಬಾಡಿಗೆ ಕೊಡಬೇಕೆಂದು ನಮೂದಿಸಿಲ್ಲ ಎಂದರೆ ಸಾಕ್ಷಿ ನಾವು ಬಾಯಿ ಮಾತಿನ ಮೂಲಕ ಕೇಳಿದ್ದೆವು ಎನ್ನುತ್ತಾರೆ. ಪ್ರತಿವಾದಿ ಬಾಡಿಗೆ ಹಣ ಮತ್ತು ಡೆಪಾಸಿಟ್ ಕೊಡದಿರುವುದಕ್ಕೆ ಬಾಡಿಗೆ ಹಣ ಕೇಳಿ ಒಂದು ಅಥವಾ ಎರಡು ತಿಂಗಳೊಳಗಾಗಿ ನೋಟಿಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನಾವು ಪ್ರತಿವಾದಿಗೆ ಕೇಳಿದ್ದೇವೆ , ಅವರು ಕೊಟ್ಟಿಲ್ಲ ಎನ್ನುತ್ತಾರೆ.

**5.** ಅಂಗಡಿ ಮಳಿಗೆ ಮತ್ತು ಗೋಡಾನ್ ನ ಕ್ಷೇತ್ರ ಬೇರೆ ಬೇರೆಯಾಗಿದೆ ಎಂದರೆ ಸರಿ , ಸಾಕ್ಷಿಯು ಮುಂದುವರೆದು ಗೋಡಾನ್ ದೊಡ್ಡದಾಗಿದೆ ಎನ್ನುತ್ತಾರೆ. ಗೋಡಾನ್ ನ ಕ್ಷೇತ್ರ

20X30 ಅಡಿ ಇರಬಹುದು. ಅಂಗಡಿ ಮಳಿಗೆಯ ಕ್ಷೇತ್ರ 8X20 ಇದೆ. ಗೋಡಾನ್‌ಗೆ ಸಂಬಂಧಿಸಿದಂತೆ ನನ್ನ ಮತ್ತು ಪ್ರತಿವಾದಿಯ ಮಧ್ಯೆ ಭೂಮಾಲೀಕ ಮತ್ತು ಬಾಡಿಗೆದಾರರ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ಮೌಖಿಕವಾಗಿ ಕರಾರು ಆಗಿತ್ತು ಎನ್ನುತ್ತಾರೆ. ನನ್ನ ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸಿ ಪ್ರತಿವಾದಿ ನನ್ನ ಬಾಡಿಗೆದಾರ ಎಂದು ತೋರಿಸಲು ಬೇರೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿ. ಗೋಡಾನ್ ಬಾಡಿಗೆ ಹಣ 3,20,000/- ರೂಗಳು ಪ್ರತಿವಾದಿಯಿಂದ ಬಾಕಿ ಇದೆ ಎಂದು ಹೇಳುವುದು ಸರಿಯಲ್ಲ ಎಂದರೆ ಸರಿಯಲ್ಲ. ಗೋಡಾನ್ ನ್ನು ಬಾಡಿಗೆ ತೆಗೆದುಕೊಂಡಾಗಿನಿಂದ ಎಷ್ಟು ತಿಂಗಳು ಪ್ರತಿವಾದಿ ಬಾಡಿಗೆ ಹಣ ಕಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ನಂತರ 6 ತಿಂಗಳು ಕೊಟ್ಟಿರಬಹುದು ಎನ್ನುತ್ತಾರೆ. ಪ್ರತಿವಾದಿ ಆ 6 ತಿಂಗಳ ಹಣವನ್ನು ಚೆಕ್ ಮುಖಾಂತರ ಕೊಟ್ಟಿದ್ದಾರೆ. ಆ ಹಣ ಯಾವ ಅಕೌಂಟಿನಲ್ಲಿ ಡೆಪಾಸಿಟ್ ಆಗಿದೆ ಎಂದರೆ ಸಾಕ್ಷಿ ಬ್ಯಾಂಕ್ ಆಫ್ ಬರೋಡಾದಲ್ಲಿರುವ ನನ್ನ ಅಕೌಂಟಿಗೆ ಜಮಾ ಆಗಿದೆ ಎನ್ನುತ್ತಾರೆ. ಅಂಗಡಿ ಮಳಿಗೆಯ ಬಾಡಿಗೆ ಹಣವನ್ನು ಮೊದಲು ಬೆಳಗಾವಿಯ ಪಯೋನಿಲ್ ಬ್ಯಾಂಕಿನಲ್ಲಿ ಜಮಾ ಮಾಡುತ್ತಿದ್ದರು, ನಂತರ ವಿಜಯಾ ಬ್ಯಾಂಕಿಗೆ ನನ್ನ ಅಕೌಂಟ್ ಬದಲಾಗಿದ್ದರಿಂದ ವಿಜಯಾ ಬ್ಯಾಂಕಿನಲ್ಲಿ ಡೆಪಾಸಿಟ್ ಮಾಡಲಾಗುತ್ತಿತ್ತು, ನಂತರ ವಿಜಯಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಆಗಿ ಮರ್ಜ್ ಆಗಿದ್ದರಿಂದ ಬ್ಯಾಂಕ್ ಆಫ್ ಬರೋಡಾದಲ್ಲಿ ಡೆಪಾಸಿಟ್ ಮಾಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ಗೋಡಾನ್ ನ್ನು ನನ್ನಿಂದ ಬಾಡಿಗೆಯಾಗಿ ಪಡೆದಿದ್ದಾರೆ ಮತ್ತು ಅದರ ಬಾಡಿಗೆ ಹಣ 5,000/- ರೂಗಳನ್ನು ಕಟ್ಟುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗೋಡಾನ್ ಹಿಂಭಾಗದಲ್ಲಿದೆ, ಬೋಳ್‌ಗೆ ಹೊಂದಿಕೊಂಡಿದೆ ಎಂದರೆ ಸರಿ, ಅದು ಯಾವುದೇ ಮುಖ್ಯ ರಸ್ತೆಗೆ ಹೊಂದಿಕೊಂಡಿಲ್ಲ ಎಂದರೆ ಸರಿ. ಅಂಗಡಿ ಮಳಿಗೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ

ಎಂದರೆ ಸರಿ. ಈಗ ಮುಖ್ಯ ರಸ್ತೆ ಬ್ರಿಡ್ಜ್ ಬಂದಿರುವ ಕಾರಣ ಬಂದ್ ಆಗಿದೆ ಎಂದರೆ ಸರಿಯಲ್ಲ, ಸಾಕ್ಷಿ ಅಂಗಡಿಯ ಮುಂದೆ 20 ಅಡಿ ರಸ್ತೆ ಇದೆ ಎನ್ನುತ್ತಾರೆ.

**6.** ಪ್ರತಿವಾದಿ ಗೋಡಾನ್ ನ್ನು ಖರೀದಿಸಲು ಒಪ್ಪಿಕೊಂಡಿದ್ದರು ಮತ್ತು ನನ್ನ ಮತ್ತು ಪ್ರತಿವಾದಿಯ ಮಧ್ಯೆ ಗೋಡಾನ್ ಖರೀದಿಯ ಕರಾರು ಆಗಿದೆ ಎಂದರೆ ಸರಿಯಲ್ಲ. ಪ್ರತಿವಾದಿ 50,000/- ರೂಗಳನ್ನು ಚೆಕ್ ಮುಖಾಂತರ ಮುಂಗಡ ಹಣವಾಗಿ ನನಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು 50,000/- ರೂಗಳನ್ನು ಪಡೆದು ಪ್ರತಿವಾದಿಗೆ ಗೋಡಾನ್ ನ ಕಬ್ಜೆಯನ್ನು Intending Purchaser ಆಗಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**